ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರಾಜ್ಯದಲ್ಲಿನ ಖಾಸಗಿ ಮತ್ತು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿಂತಿ ವೀರಿದ ವಂತಿಗೆಯಂನಂ ವಸೂಲಿ ಮಾಡುತ್ತಿರುವುದು

೩೮೩. ಶ್ರೀ ಟಿ. ಎಸ್. ಮಣಿ (ಕೆಜಿಎಫ್).—ಮಾನ್ಯ ಪ್ರಾಥವಿಂಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿನ ಖಾಸಗಿ ಸರ್ಕಾರಿ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ವಿಂತಿ ವೀರಿ ವಂತಿಗೆ ಬೋಧನಾ ಶುಲ್ಕ,ತೀರ್ಗಡೆಯಾದ ನಂತರ ಪ್ರತಿ ವರ್ಷ ಪ್ರವೇಶ ಶುಲ್ಕ ಪಡೆಯುತ್ತಿರುವುದು ವಾಸ್ತವೆ? ಹಾಗಿದ್ದಲ್ಲಿ, ಈ ಹಾವಳಿಯಂನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಆ) ಎಲ್ಲರಿಗೂ ನಿಶುಲ್ಕವಾಗಿ ಶಿಕ್ಷಣವನ್ನು ನೀಡಬೇಕೆಂಬುದು ಸರ್ಕಾರದ ನೀತಿಯೇ ? ಹಾಗಿದ್ದರೆ ಖಾಸಗಿ ಅನುದಾನಿತ ಅಥವಾ ಅನುದಾನದ ರಹಿತ ನರ್ಸರಿ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚು ಹೆಚ್ಚು ಹಣವನ್ನು ವಂತಿಗೆ ಮೂಲಕ ವಸೂಲಿ ಮಾಡುವುದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥವಿಂಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು).—

ಅ) ಹೌದು, ಖಾಸಗಿ ಶಾಲೆಗಳಲ್ಲಿ ಶುಲ್ಕ ವಸೂಲಿಯನ್ನು ನಿಯಂತ್ರಿಸಲು ಸರ್ಕಾರವು ಹೊರಡಿಸಿದ ಆದೇಶವನ್ನು ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ ೮೧೮೮/೮೫೫ರಲ್ಲಿ ತಡೆಹಿಡಿದಿರುವುದರಿಂದ ಸದರಿ ರಿಟ್ ಅರ್ಜಿಯನ್ನು ಉಚ್ಚ ನ್ಯಾಯಾಲಯವು ವಿಲೇ ಮಾಡಿದ ಕೂಡಲೇ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ) ನರ್ಸರಿ ಶಿಕ್ಷಣವು ಕಡ್ಡಾಯ ಶಿಕ್ಷಣದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಕಡ್ಡಾಯ ನಿ; ಶುಲ್ಕ ಶಿಕ್ಷಣವು ಎಲ್ಲಾ ಸರ್ಕಾರಿ ಶಾಲೆಗಳಿಗೂ ಅನ್ವಯಿಸುತ್ತದೆ. ಇದನ್ನು ಖಾಸಗಿ ಶಾಲೆಗಳಲ್ಲಿ ಜಾರಿಗೆ ತರಲು ಸಾಧ್ಯವಿಲ್ಲ. ಖಾಸಗಿ ಶಾಲೆಗಳಲ್ಲಿ ಶುಲ್ಕವನ್ನು ವಸೂಲಿಯನ್ನು ನಿಯಂತ್ರಿಸುವ ಬಗ್ಗೆ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯನ್ನು ಉಚ್ಚ ನ್ಯಾಯಾಲಯವು ತಡೆಹಿಡಿದಿರುವುದರಿಂದ, ಉಚ್ಚ ನ್ಯಾಯಾಲಯವು ರಿಟ್ ಅರ್ಜಿಯನ್ನು ವಿಲೇ ಮಾಡುವವರೆಗೆ ಅಥವ ತಡೆಯಾಜ್ಞೆಯನ್ನು ಹಿಂತೆಗೆದುಕೊಳ್ಳುವವರೆಗೆ ಸರ್ಕಾರವು ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ.

SRI T. S. MANI.—If the matter is in High Court, how can the management themselves increase and collect the fees?

SRI B. SOMASHEKAR.—They cannot increase fees when it is before the Court.

SRI T. S. MANI.—They are collecting more fees everywhere and every year.

SRI B. SOMASHEKHAR.-Hon member can bring it to the notice of the Government. Action will be taken on such cases.

SRI T. S. MANI.—I will give the details if you are going to take action.

SRI B. SOMASHEKAR.—Yes we will take action.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ನೀತಿಗೆ ಸಂಬಧಿಸಿದ್ದೇ ಹೊರತು ಲೋಕಲ್ ಪ್ರಶ್ನೆ ಅಲ್ಲ,

ಅಧ್ಯಕ್ಷರು.—ಮಾನ್ಯ ಮೊಯಿಲಿಯವರೇ, ಒಂದು ಪ್ರಶ್ನೆಗೆ ಮೂರು ನಿಮಿಷ ಮಾತ್ರ ಅವಕಾಶ ಇರುವುದು ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಇದು ಲೋಕಲ್ ಕ್ವೆಶ್ಚನ್ನೇ ಅಥವಾ ಪಾಲಿಸಿ ಮ್ಯಾಟರೇ ಎಂಬುದನ್ನು ತಾವು ಸ್ಪಷ್ಟಪಡಿಸಬೇಕು. ಪಾಲಿಸಿಗೆ ಸಂಬಂಧಿಸಿದ್ದಾದರೆ ತಾವು ಇದಕ್ಕೆ ಸ್ವಲ್ಪ ಅವಕಾಶ ಕೊಡಬೇಕಾಗುತ್ತದೆ. ವಿದ್ಯಾಶಾಲೆಗಳಲ್ಲಿ ಪಂತಿಗೆ ಕಲೆಕ್ಟ್ ಮಾಡುವ ವಿಚಾರ, ಇದರಲ್ಲಿರುವುದರಿಂದ ಇದು ಪಾಲಿಸಿ ಮ್ಯಾಟರಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ —ಅಧ್ಯಕ್ಷರೇ, ಪ್ರಶ್ನೋತ್ತರ ಕಾಲದಲ್ಲಿ ನೀತಿಯ ಪ್ರಶ್ನೆ ಬರುವುದಿಲ್ಲ. ಈ ಅವಧಿಯಲ್ಲಿ ಕೇವಲ ಇನ್‌ಫರ್ಮೇಷನ್ ಕೇಳಬೇಕು ಅಷ್ಟೇ. ಬಹಳ ಅನುಭವ ಇದ್ದಂಥವರೇ ಹೀಗೆ ಕೇಳಿದರೆ ಹೇಗೆ ?

ಅಧ್ಯಕ್ಷರು.—ಇಂದು ೨೦ ಪ್ರಶ್ನೆಗಳು ಇವೆ. ಅದನ್ನು ಮಂಗಿಸಬೇಕಾಗಿರುವುದರಿಂದ ಬೇರೆಯವರ ಸಪ್ಲಿಮೆಂಟರಿಗೆ ನಾನು ಅಲೋ ಮಾಡುವುದಿಲ್ಲ. ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ನೀತಿ ಅಲ್ಲವೆಂದು ಹೇಳಿಬಿಟ್ಟರೆ ನಾವು ಕುಳಿತುಕೊಂಡರೆ ಬಿಡುತ್ತೀವೆ.

ಅಧ್ಯಕ್ಷರು.—ಈಗ ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ. ಈಗಾಗಲೇ ಎಂಟು ಮಿನಿಟ್‌ಗೆ ಒಂದು ಕ್ವೆಶ್ಚನ್ನಾಗಿದೆ. ಆದ್ದರಿಂದ ಕ್ವೆಶ್ಚನ್ ಹಾಕಿದವರಿಗೆ ಮಾತ್ರ ನಾನು ಅಲೋ ಮಾಡುವುದು.

SRI M. VEERAPPA MOILY.—On a question of general importance we are entitled to ask supplementary questiones.

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ. ಈಗ ಸಭೆ ನಡೆಸಬೇಕೋ ಬೇಡವೋ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸಭೆ ನಡೆಯಲಿ ಎಂದೇ ನಾವು ಬಂದಿರುವುದು.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ ನಿಮ್ಮ ಕಡೆಯವರನ್ನು ನೀವು ಕಂಟ್ರೋಲ್ ಮಾಡಿ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ.—ನಾನೂ ಆ ಸ್ಥಾನದಲ್ಲಿ ಕುಳಿತು ಸಭೆ ನಡೆಸಿದ್ದೇನೆ. ಇಂಥ ಪಾಲಿಸಿ ಮ್ಯಾಟರ್ಸ್ ಬಂದಾಗ ನೀವು ಸ್ವಲ್ಪ ಜಾಸ್ತಿ ಅವಕಾಶ ಕೊಡಬೇಕು. ಸಭೆ ನಡೆಸಬೇಕೆಂದೇ ನಾವೂ ಮಾತನಾಡುತ್ತಿರುವುದು. ಯಾವುದೋ ಒಂದು ಊರಿನದೋ ಅಥವಾ ತಾಲ್ಲೂಕಿನದೋ ವಿಷಯ ಆದರೆ ಅದನ್ನು ಆರಿಸಿಬಿಡಬಹುದು. ಆದರೆ ಇದು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಪಂತಿಗೆ ಕಲೆಕ್ಟ್ ಮಾಡುವುದಕ್ಕೆ ಸೇರಿದ್ದು ದರಿಂ, ಇದು ಇಡೀ ರಾಜ್ಯಕ್ಕೆ ಅನ್ವಯವಾಗುವುದು.

ಅಧ್ಯಕ್ಷರು.—ನೀವು ಸಭೆ ನಡೆಸಿದ್ದನ್ನು ನಾನೂ ನೋಡಿದ್ದೇನೆ. ಪ್ರಶ್ನೆ ಮೇಲೆ ಇದಕ್ಕೆ ಅವಕಾಶ ಕೊಡುವುದಿಲ್ಲ. ಬೇಕಾದರೆ ಅರ್ಧ ಗಂಟೆಗೆ ಚರ್ಚೆ ಮಾಡಲು ಅವರು ನೋಟೀಸ್ ಕಳಿಸಲಿ, ಆಗ ಎಲ್ಲರೂ ಮಾತನಾಡಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ —ಇದರ ಬಗ್ಗೆ ಮೂರು ನಾಲ್ಕು ಪ್ರಶ್ನೆ ಕೇಳಬೇಕಾದದು ಅವಶ್ಯಕತೆ ಇದೆ ಎಲ್ಲದಕ್ಕೂ ಆಗುವುದಿಲ್ಲವೆಂದು ಹೇಳಿದರೆ ಆಗುವುದಿಲ್ಲ. ಇದು ಪಾಲಿಸಿ ಮ್ಯಾಟರ್ ತಾವು ಹಾಗೆ ಮಾಡುವುದು ಸರಿಯಲ್ಲ ಸಪ್ಲಿಮೆಂಟರಿ ಕೇಳಲು ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಬಿಜಿನೆಸ್ ಅಡ್ವೈಸರಿ ಕಮಿಟಿ ಕರೆದು...

(ಗೊಂದಲ)

ಅಧ್ಯಕ್ಷರು.—ಒಂದು ಪ್ರಶ್ನೆಗೆ ಮೂರು ನಿಮಿಷ ಅವಕಾಶ. ಹತ್ತು ನಿಮಿಷ ಯಾರಿಗೂ ಅವಕಾಶ ಕೊಡುವುದಿಲ್ಲ ಪ್ರಶ್ನೆ ಯಾರು ಹಾಕಿದ್ದಾರೆ ಅವರಿಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಸಾರ್ವಜನಿಕ ಮಹತ್ವದ ಪ್ರಶ್ನೆ

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕೂಳಿತುಕೊಳ್ಳಿ ಮುಂದಿನ ಪ್ರಶ್ನೆಯವರನ್ನು ಕರೆದಿದ್ದೇನೆ ಇದಕ್ಕೆ ಬೇಕಾದರೆ ಅರ್ಧಗಂಟೆ ಕಾಲ ಚರ್ಚೆಗೆ ಸೂಚನೆಯನ್ನು ಕೊಡಲಿ, ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಪ್ರಶ್ನೆ ಹಾಕಿದ ಮೇಲೆ...

ಅಧ್ಯಕ್ಷರು.—ನೀವು ಈ ರೀತಿ ಮಾಡಿದರೆ ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ರೆಕಾರ್ಡ್ ಮಾಡಬೇಡಿ ಎಂದು ಹೇಳುವುದು ಕೊನೆಯ ಅಸ್ತ್ರ. I urge you not to do that. Hon Speaker should not do that.

(ಗೊಂದಲ)

ಅಧ್ಯಕ್ಷರು.—ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ ಇವತ್ತು ೨೦ ಪ್ರಶ್ನೆಗಳು ಇವೆ ಒಂದು ಗಂಟೆಯೊಳಗೆ ಎಲ್ಲವನ್ನೂ ಮುಗಿಸಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಪ್ರಶ್ನೋತ್ತರ ವೇಳೆಯಲ್ಲಿ ಪಾಲಿಸಿ ವಿಚಾರ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂದು.

(ಗೊಂದಲ)

ಅಧ್ಯಕ್ಷರು.—ಯಾರು ಪ್ರಶ್ನೆ ಹಾಕುತ್ತಾರೆ, ಅವರಿಗೆ ಮಾತ್ರ ಅವಕಾಶ ಕೊಡುತ್ತೇನೆ ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಪ್ರಶ್ನೆ ಹಾಕುವವರಿಗೆ ಮಾತ್ರ ಅವಕಾಶ ಕೊಡಬೇಕೆಂದು ಎಲ್ಲಿ ಕಾನೂನು ಇದೆ ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಸಮಯ ಇದ್ದರೆ ಅವಕಾಶ ಕೊಡುತ್ತೇನೆ

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ...

(ಗೊಂದಲ)

ಅಧ್ಯಕ್ಷರು.—ನೀವು ಹೇಳುವುದು ಅವರು ಹೇಳುವುದು ರೆಕಾರ್ಡ್‌ಗೆ ಹೋಗುವುದಿಲ್ಲ ತಾವು ದಯವಿಟ್ಟು ಕೂಳಿತುಕೊಳ್ಳಿ ಸಪ್ಲಿಮೆಂಟರಿಗೆ ಅವಕಾಶ ಕೊಡುವುದಿಲ್ಲ.

Sri S. Bangarappa.—It is our right to have whatever we say.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಕ್ರಿಯಾ ಲೋಪ ಎತ್ತಿದ್ದಾರೆ ಅವರು ಮಾತನಾಡಲಿ.

(ಗೊಂದಲ)

ಅಧ್ಯಕ್ಷರು.—ನಿಮಿಷವಾಗುತ್ತಾ ಬಂತು ಇನ್ನೂ ಒಂದು ಪ್ರಶ್ನೆ ಮುಗಿಸುವುದಕ್ಕೆ ಆಗಲಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಕಾರಣಕರ್ತರು ನೀವೇ ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಮುಂದಿನ ಪ್ರಶ್ನೆಗೆ ಉತ್ತರ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮೊದಲು ಇದು ತೀರ್ಮಾನವಾಗಬೇಕು

(Interruption)

ಅಧ್ಯಕ್ಷರು.—ಸಪ್ಲಿಮೆಂಟರಿಗೆ ಅವಕಾಶ ಕೊಡುವುದಿಲ್ಲ ಎರಡನೆಯ ಪ್ರಶ್ನೆ ಕೇಳಲಿಕ್ಕೆ ಅವಕಾಶ ಕೊಡುತ್ತೇನೆ ಈ ಸದನವನ್ನು ನಡೆಸಬೇಕು ದಯವಿಟ್ಟು ಕಂಳಿತುಕೊಳ್ಳಿ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಜನರಲ್ ಪ್ರಶ್ನೆ ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದ್ದು ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶ ಕೊಡಬೇಕು ೫ ನಿಮಿಷದಲ್ಲಿ ಮಂಗಿಯಂತಾದ್ದಕ್ಕೆ ೧೫ ನಿಮಿಷವಾಗಿದೆ. ಅವರು ಕೇಳಿದ ಪ್ರಶ್ನೆ ಕೆ.ಜಿ.ಎಫ್‌ಗೆ ಸೀಮಿತವಾಗಿದ್ದರೆ ಅದರ ಪ್ರಶ್ನೆ ಬೇರೆ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು ಸಪ್ಲಿಮೆಂಟರಿ ಕೇಳಬಾರದೆಂದು ಎಲ್ಲಿ ಇದೆ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಪ್ರಶ್ನೆಗಳನ್ನು ಕೇಳಬಹುದು ಎಂದು ಇದೆ, ಅದನ್ನು ಬೇಕಾದರೆ ನಾನು ತೋರಿಸುತ್ತೇನೆ.

SRI A. LAKSHMISAGAR.—Sir, "any member when called upon by the Speaker May ask a supplementary question arising out of the main question and answer thereto for the purpose of further eliciting any matter of fact" Only on being permitted by the Speaker a supplementary question can be asked. I am only reading from Shakder and Kaul.

Further "A supplementary question framed with a view to asking the government to lay down certain policy is inadmissible, or if it is for the purpose to get assurance from the government or to seek information from the minister on a matter, supplementary question should seek information rather than giving information or make suggestions for action. They should not proceed with introduction. Ministers' reply thereto should be brief" These are all the parameters within which supplementary questions can be asked with the permission of the Speaker.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರು ಲಕ್ಷ್ಮೀಸಾಗರ್‌ರವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಎಂದು ಹೇಳಿದರಂ, ನೀವು ನೋಡಿದರೆ ಇದು ಪಾಯಿಂಟ್ ಆಫ್ ಆರ್ಡರ್ ಅಲ್ಲ ಎಂದು ಹೇಳಂತಿದ್ದೀರಿ.

(ಗೊಂದಲ)

ಅಧ್ಯಕ್ಷರು.—ಹಾಗಿದ್ದರೆ ನಾನು ಎಲ್ಲಾ ಕ್ವೆಶ್ಚನ್‌ಗಳನ್ನೂ ಲ್ಯಾಪ್ಸ್ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಸ್ವಲ್ಪ ಅವಕಾಶ ಕೊಡಬೇಕು.

ಅಧ್ಯಕ್ಷರು.—ನಾನು ಪರ್ಮಿಷನ್ ಕೊಡುವುದಿಲ್ಲ. I have already called the nex member. The Hon. Minister is on his legs to reply.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದರೆ ಸಾಮಾನ್ಯವಾಗಿರತಕ್ಕಂಥ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಒಬ್ಬ ಸದಸ್ಯರ ಹಕ್ಕನ್ನು ಮೊಟಕು ಮಾಡತಕ್ಕಂಥದ್ದು ಆಗಬಾರದು. ಪ್ರಶ್ನೆಯನ್ನು ತಾವು ನೋಡಬೇಕು.

ಅಧ್ಯಕ್ಷರು.—ಮಾನ್ಯ ದೇವೇಗೌಡರೇ, ತಾವು ಉತ್ತರ ಹೇಳಿ. ನಾನು ಪರ್ಮಿಷನ್ ಕೊಟ್ಟಿಲ್ಲ, ಕೊಡುವುದೂ ಇಲ್ಲ. ನಾನು ಈ ಎಲ್ಲಾ ಪ್ರಶ್ನೆಯನ್ನೂ ನಿನ್ನೆ ರಾತ್ರಿಯೇ ನೋಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಪ್ರಶ್ನೆಯನ್ನು ನೋಡಿ ಇಡೀ ರಾಜ್ಯಕ್ಕೆ ಈ ಪ್ರಶ್ನೆಯಿಂದ ಲಾಭ ಆಗುತ್ತಿದ್ದರೆ ಏತಕ್ಕೆ ನಮಗೆ ಕೇಳುವುದಕ್ಕೆ ತಾವು ಅವಕಾಶ ಕೊಡಬಾರದು.

ಅಧ್ಯಕ್ಷರು.—ನಾನು ಪರ್ಮಿಷನ್ ಕೊಟ್ಟಿಲ್ಲ, ಕೊಡುವುದೂ ಇಲ್ಲ ಒಂದು ಮಿನಿಟ್ಕೂ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು.—ಇನ್ನೂ ೧೯ ಪ್ರಶ್ನೆಗಳು ಇವೆ. ಬೇರೆಯವರಿಗೆ ಅವಕಾಶ ಮಾಡಿ ಕೊಡಬೇಕು. ದಯವಿಟ್ಟು ತಾವು ಕುಳಿತುಕೊಳ್ಳಿ

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಾಥಮಿಕ ಶಾಲೆಗಳಲ್ಲಿ ಪಂತಿಕೆ ವಸೂಲು ಮಾಡುವುದಕ್ಕೆ ಸರ್ಕಾರ ಶಾಮೀಲು ಆಗಿದೆಯೆಂದು ನಾವು ಹೇಳಬೇಕಾಗುತ್ತದೆ. ಈ ರೀತಿ ಮಾಡುವುದೇ ಸರ್ಕಾರದ ನೀತಿ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ದೇವೇಗೌಡರೇ, ನೀವು ಉತ್ತರ ಹೇಳಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಇದು ಪಾಲಿಸಿ ಇದೆ. ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶ ಕೊಡಿ.

MR. SPEAKER.—It is not possible.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—Every thing is possible. ಈ ಸದನದಲ್ಲಿ ಪಾಸಿಬಲ್ ಇದ್ದದ್ದನ್ನು ಪಾಸಿಬಲ್ ಎಂದು ಮಾಡುತ್ತೀರಿ, ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶ ಕೊಡಿ,

ಅಧ್ಯಕ್ಷರು.—ಇಲ್ಲ ಪರ್ಮಿಷನ್ ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಸದನದಲ್ಲಿ ಬಂದಂತಹ ಒಂದು ಪದ್ಧತಿ ಪ್ರಕಾರ ನೀವು ಪರ್ಮಿಷನ್ ಕೊಡಬಹುದು ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಯೋ ಅದನ್ನೇ ಮಾನ್ಯ ಅಧ್ಯಕ್ಷರು ರೂಲಿಂಗ್ ಎಂದು ಕೊಡುತ್ತಾರೆ.

ಅಧ್ಯಕ್ಷರು.—ನಾನು ಪರ್ಮಿಷನ್ ಕೊಡುವುದಿಲ್ಲ. ಮಾನ್ಯ ದೇವೇಗೌಡರೇ, ನೀವು ಉತ್ತರ ಹೇಳಿ.

ನರಸಿಂಹರಾಜಪುರ ತಾಲ್ಲೂಕು ಮಂತ್ರಿನ ಕೊಪ್ಪ
ಏತ ನೀರಾವರಿ ಕಾಮಗಾರಿ ಕೆಲಸ ಪ್ರಾರಂಭಿಸುವ ಬಗ್ಗೆ

೨೫೮ ಶ್ರೀ ಹೆಚ್. ಜಿ. ಗೋವಿಂದೇ ಗೌಡ(ಶೃಂಗೇರಿ).—ಮಾನ್ಯ ಸಣ್ಣ ನೀರಾವರಿ ಮಂತ್ರಿ ಏತ ನೀರಾವರಿ ರಾಜ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನರಸಿಂಹರಾಜಪುರ ತಾಲ್ಲೂಕಿನ ಮಂತ್ರಿನಕೊಪ್ಪ ವ್ಯವಸಾಯಗಾರರು ಭದ್ರಾ ನದಿಯ ಅಣೆಕಟ್ಟಿನ ನಿರ್ಮಾಣದಿಂದ ಜಮೀನು ಕಳೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?